ಕುಳಿತು ಅತ್ತಿಗೆ ಅಣ್ಣನೊಂದಿಗೆ ಮಾತನಾಡುತ್ತ ಕುಳಿತಿರುವುದನ್ನು ನೋಡಿ ವೀರುವಿನ ಎದೆ ಧಸಕ್ಕೆಂದಿತು. ಆ ಸಮಯದಲ್ಲಿ ಅಮ್ಮ ಮನೆಗೆ ಬರುವುದು ಗೊತ್ತಿಲ್ಲದ ಕಾರಣ ಮಾವನಿಗೆ ಅತ್ತಿಗೆ ಬೆಳಗ್ಗೆಯೇ ಹೇಳಿ ಹೋಗಿದ್ದರಿಂದ ಈಗ ತನ್ನನ್ನು ಈ ವೇಷದಲ್ಲಿ ನೋಡಿದರೂ ಏನೂ ಅನ್ನುವುದಿಲ್ಲ ಅನ್ನೋ ನಂಬಿಕೆಯಿಂದ ಹಾಗೇ ಮನೆಗೆ ಬಂದು ಬಿಟ್ಟಿದ್ದ. ಈಗ ಭೂತದರ್ಶನವಾದಂತೆ ಭಯದಂತೆ ಬಿಳಿಚಿಕೊಂಡು ನಿಂತುಬಿಟ್ಟ. ಅದೆಷ್ಟು ಹೊತ್ತು ನಿಂತಿದ್ದನೊ, ಹೊರಗಿನಿಂದ ಬಂದ ತರುಣ್ ಸುಂದರ ಹುಡುಗಿ ತಮ್ಮ ಮನೆಯ ಬಾಗಿಲ ಬಳಿ ನಿಂತಿರುವುದನ್ನು ಆಶ್ಚರ್ಯದಿಂದ ನೋಡಿ, 'ಹಲೋ ಯಾರು ಬೇಕಿತ್ತು?' ಅಂತ ಕೇಳಿದ. ಅರೆಕ್ಷಣ ನೋಡಿ 'ಅಯ್ಯೊ ವೀರು ನಿಜವಾಗಲೂ ನನಗೆ ಗೊತ್ತಾಗಲೇ ಇಲ್ಲ ಕಣೊ, ಯಾರೋ ಸುಂದರ ಹುಡುಗಿ ಮನೆಗೆ ಬರ್ತಾ ಇದ್ದಾಳೆ ಅಂತ ಅಂದುಕೊಂಡೆ, ಇರು ಈಗೊಂದು ಜೋಕ್ ಮಾಡ್ತೀನಿ, ನೀನು ಏನೂ ಮಾತಾಡಬೇಡ' ಅಂತ ಅವನಿಗೆ ಮಾತಾಡಲು ಅವಕಾಶ ಕೊಡದೆ ಅವನನ್ನು ಕರೆದುಕೊಂಡು ಒಳಗೆ ಬಂದ. 'ಅಪ್ಪ ಇವಳು ನನ್ನ ಕ್ಲಾಸ್‌ಮೇಟ್ ತಂಗಿ, ನಾನು ಇವಳು ಲವ್ ಮಾಡ್ತಾ ಇದ್ದೀವಿ, ಇವಳನ್ನೇ ನಾನು ಮದ್ವೆ ಆಗೋದು' ಎಂದು ಒಂದು ಶಾಕ್ ಕೊಟ್ಟು ಬಿಟ್ಟ. ಸುಧಾ, ಭಾಸ್ಕರ ಆಘಾತದಿಂದ ಮಾತು ಹೊರಡದೆ ನಿಂತು ಬಿಟ್ಟರು. ವಾರಿಜ ಕೂಡಾ ಶಾಕ್‌ನಿಂದ 'ಏನೋ ಇದು, ಮನೆಗೇ ಕರ್ಕೊಂಡು ಬಂದು ಬಿಟ್ಟಿದ್ದೀಯಾ, ಎಷ್ಟು ಧೈರ್ಯ ನಿಂಗೆ. ಅಪ್ಪ ಅಮ್ಮ ಏನು ಅಂದುಕೊಳ್ಳುತ್ತಾರೆ ಅಂತ ಜ್ಞಾನ ಬೇಡವಾ ನಿಂಗೆ? ನೀನೇನಮ್ಮ ಹೆಣ್ಣು ಹುಡುಗಿ ಆಗಿ ಸ್ವಲ್ಪನೂ ಅಂಜಿಕೆ ಇಲ್ಲದೆ ಬಂದಿದ್ದೀಯಾ' ಅಸಹನೆಯಿಂದ ಕೇಳಿದಳು. ಅತ್ತೆ ಬೈಯುತ್ತಿದ್ದರೆ ತರುಣ್ ನಗು ತಡೆಯಲಾರದೆ ಜೋರಾಗಿ ನಕ್ಕು ಬಿಟ್ಟ. ಏಪ್ರಿಲ್ ಫೂಲ್, ಏಪ್ರಿಲ್ ಫೂಲ್ ಅಂತ ಕುಣಿಯುತ್ತಾ, 'ಅತ್ತೆ ನಿನ್ನ ಮಗನ್ನೇ ನೀನು ಗುರ್ತು ಹಿಡಿಯಲಿಲ್ಲವಲ್ಲ, ವೀರು ಅತ್ತೆ ಇವನು' ಎಂದಾಗ ಸುಧಾ, 'ಅಯ್ಯೊ ಮನೆ ಹಾಳ, ಒಂದೇ ಸಲಕ್ಕೆ ನನ್ನ ಸಾಯೊ ಹಂಗೆ ಮಾಡಿ ಬಿಟ್ಟೆಯಲ್ಲೋ, ಸದ್ಯ ಬದುಕಿದೆ, ಎಲ್ಲಿ ನೀನು ನಿಜವಾಗಿಯೂ ಹುಡುಗಿಯನ್ನು ಕರೆದುಕೊಂಡು ಬಂದು ಬಂದು ಬಿಟ್ಟಿದ್ದಿಯಾ ಅಂತ ಅಂದುಕೊಂಡು ನನ್ನೆದೆನೇ ಒಡೆದು ಹೋಗಿತ್ತು. ಅಯ್ಯೋ ವೀರೂ ಅದೆಷ್ಟು ಚೆನ್ನಾಗಿ ಕಾಣಿಸುತ್ತಿದ್ದಿಯೋ, ನನ್ನದೆ ದೃಷ್ಟಿ ತಗುಲುತ್ತೆ. ಇರು ದೃಷ್ಟಿ ತೆಗೆಯುತ್ತೇನೆ, ಬೆಳಿಗ್ಗೆ ನೀನು ಹೇಳಿದ್ದೆ ಹುಡುಗಿ ಡ್ರೆಸ್ ಹಾಕಬೇಕು, ಕಾರ್ಯಕ್ರಮ ಇದೆ ಅಂತ. ನನಗೆ ಮರೆತೇ ಹೋಗಿತ್ತು. ಬಾ ಮೊದಲು ದೃಷ್ಟಿ ತೆಗೆಯುತ್ತೇನೆ' ಅಂತ ಹೇಳಿ ವೀರುವಿನ ಕೈ ಹಿಡಿದು ಒಳ ಕರೆದುಕೊಂಡು ಹೋಗಿ ಉಪ್ಪು ಮೆಣಸನ್ನು ನೀವಾಳಿಸಿದಳು.

ಅತ್ತೆಯ ಕೆಲಸ ಮುಗಿದೊಡನೆ ಓಡಿ ಕೋಣೆಯೊಳಗೆ ಸೇರಿ ಡ್ರೆಸ್ ಬದಲಿಸಿ ಹೊರಗೆ ಬಂದು ಅಮ್ಮನನ್ನು ಎದುರಿಸುವ ಧೈರ್ಯಸಾಲದೆ ಮಂಕಾಗಿ ಕುಳಿತುಬಿಟ್ಟ. ತನಗಾದ ಶಾಕ್‌ನಿಂದ ಹೊರಬಾರದೆ ದಿಗ್ಮೂಢಳಾಗಿ ವಾರಿಜ ಸುಮ್ಮನೆ ಕುಳಿತು ಬಿಟ್ಟಿದ್ದಳು. ಯಾವುದನ್ನು ತಡೆಯಲು ಮಗನನ್ನು ಮನೆಯವರ ವಿರುದ್ಧ ಇಲ್ಲಿಗೆ ಕರೆದುಕೊಂಡು ಬಂದಿದ್ದಳೊ ಅದು ನಿರಾತಂಕವಾಗಿ ನಡೆದು ಹೋಗುತ್ತಿದೆ. ಈ ಭಾಗ್ಯಕ್ಕೆ ಇಲ್ಲಿ ಇವನನ್ನು ಇಲ್ಲಿ ಬಿಡಬೇಕಿತ್ತೇ? ಇದನ್ನು ತಡೆಯಲು ನಾನೆಷ್ಟು ತ್ಯಾಗ ಮಾಡಿದ್ದೆ. ಕೈಹಿಡಿದ ಪತಿಯ ಪ್ರೀತಿಯನ್ನೇ ಶಾಶ್ವತವಾಗಿ ಕಳೆದುಕೊಂಡಿದ್ದು, ಸ್ವಂತ ತಂಗಿಯಂತೆ ನೋಡಿಕೊಳ್ಳುತ್ತಿದ್ದ ಅಕ್ಕ–ಬಾವನ ಮಮತೆಯನ್ನೇ ಕಳೆದುಕೊಂಡಿದ್ದು, ಮಕ್ಕಳ ದೃಷ್ಟಿಯಲ್ಲಿ ತಾನು ಕೆಟ್ಟವಳಾಗಿದ್ದು, ಸ್ವತಃ ಮಗನಿಗೂ ಕೆಟ್ಟವಳಾಗಿ ಮನೆಯಿಂದ ದೂರ ಮಾಡಿದ್ದು. ನಂದನವನದಂತಿದ್ದ ಮನೆಯನ್ನು ಹಾಳು ಮಾಡಿಕೊಂಡಿದ್ದು... ಇವೆಲ್ಲ ಏನೂ ಸಾರ್ಥಕವಾಗಲೇ ಇಲ್ಲ, ಅಯ್ಯೋ ದೇವರೆ ನಾನೆಂಥಾ ಮೂರ್ಖಳಾಗಿಬಿಟ್ಟೆನಲ್ಲ, ಮನದೊಳಗಿನ ಈ ಹೋರಾಟ ಅಲ್ಲಿ ಯಾರಿಗೂ ತಿಳಿಯುವಂತಿರಲಿಲ್ಲ.

ತರುಣ್ 'ಏನತ್ತೆ, ಶಾಕ್ ಆಯ್ತಾ ಮಗನ್ನ ನೋಡಿ, ನನಗಂತೂ ವೀರು ಅಂದ್ರೆ ತುಂಬಾ ತುಂಬಾ ಇಷ್ಟ ಅತ್ತೆ, ಅವನನ್ನೇ ಮದುವೆಯಾಗಿ ಬಿಡುತ್ತೇನೆ' ಎಂದು ಹೇಳಿ ಜೋರಾಗಿ ನಕ್ಕ. ಅಯ್ಯೋ ವಿಧಿಯೇ ಮಗನ ಬಾಳು ಹೀಗೆ ನಗೆಪಾಟಲಾಗಿ ಹೋಯ್ತೆ. ಕಣ್ಣಿಂದ ಅವಳಿಗರಿವೇ ಇಲ್ಲದೆ ಕಂಬನಿ ಜಾರಿತು. ಅದನ್ನು ನೋಡಿ ಗಾಬರಿ ಆದ ಭಾಸ್ಕರ 'ವಾರಿಜ ಅಳ್ತಾ ಇದ್ದಿಯಾ, ತರುಣ್ ನಿನಗೆ ತಮಾಷೆ ಮಾಡ್ತಾ ಇದ್ದಾನಮ್ಮ, ಅವನಿಗೆ ನಿನ್ನ ಅಳಿಯನೇ ಆಗಬೇಕು ಅಂದ್ರೆ ನಿಮ್ಮನೆಯಲ್ಲೇ ಐದು ಜನ ಚಂದುಳ್ಳಿ ಚೆಲುವೆಯರು ಇದ್ದಾರೆ. ಅವರಲ್ಲೇ ಒಬ್ಬರನ್ನ ಆರಿಸಿಕೊಳ್ಳುತ್ತಾನೆ ಬಿಡು, ಹುಡುಗನನ್ನ ಮದುವೆಯಾಗುವ ಹಣೆಬರಹವೇಕೆ ಅವನಿಗೆ' ಅಂತ ತಂಗಿಗೆ ಹೇಳಿ 'ಲೋ ತರುಣ್ ನಿನಗೇನು ಗೊತ್ತಾಗುವುದಿಲ್ಲವೇನೊ, ಅತ್ತೆ ಅಪರೂಪಕ್ಕೆ ಬಂದಿದ್ದಾಳೆ, ನೀನು ಏನೇನೊ ಹೇಳಿದರೆ ಅವಳಿಗೆ ಬೇಸರ ಆಗುವುದಿಲ್ಲವೇ' ಅಂತ ರೇಗಿದ.

'ಸಾರಿ ಅಪ್ಪ, ತಪ್ಪಾಯಿತು ಅತ್ತೆ, ನನ್ನ ಕ್ಷಮಿಸಿ' ವಾರಿಜಳ ಬಳಿ ಕ್ಷಮೆ ಯಾಚಿಸಿ, ಅತ್ತೆ ಯಾಕೆ ಅಷ್ಟು ಸಣ್ಣ ವಿಷಯಕ್ಕೆ ಅತ್ತುಬಿಟ್ಟರಲ್ಲ, ಅಪ್ಪನೂ ನನಗೆ ಬೈಯ್ದುಬಿಟ್ಟರಲ್ಲ ಅಂತ ತಲೆಕೆಡಿಸಿಕೊಳ್ಳುತ್ತಾ ಒಳಹೋದ. ಒಳಬಂದರೆ ವೀರೂ ಆತಂಕದಿಂದ ಚಡಪಡಿಸುತ್ತಾ ಕುಳಿತಿದ್ದಾನೆ. 'ಏನಾಯ್ತೊ ವೀರೂ, ಅಮ್ಮ ಬೈತಾಳೆ ಅಂತ ಹೆದರಿದಿಯಾ, ಹೊಡೆಯೊ ಗೋಲಿ, ಅದಕ್ಕೆಲ್ಲ ತಲೆಕೆಡಿಸಿಕೊಂಡರೆ ಅಷ್ಟೆ' ಎಂದು ಉಡಾಫೆಯಿಂದ ನುಡಿದ. ಆದರೆ ಅದಷ್ಟು ಸಣ್ಣ ವಿಷಯ ಅಲ್ಲ ಅಂತ ವೀರುಗೆ ಗೊತ್ತಿತ್ತು. ಹೊರಬರಲು ಧೈರ್ಯ ಸಾಲದೆ ಓದುವ ನೆವ ಮಾಡಿಕೊಂಡು ಕೋಣೆಯಲ್ಲಿಯೇ ಉಳಿದುಬಿಟ್ಟ. ತನಗೇಕೆ ಈ ರೀತಿಯ ಹುಚ್ಚು. ಹೆಣ್ಣಿನ ಉಡುಗೆ ತೊಡುಗೆ ತನಗೇಕೆ ತುಂಬಾ ಇಷ್ಟವಾಗುತ್ತದೆ? ಅಂದವಾಗಿರುವ ಹುಡುಗರನ್ನು ನೋಡಿದರೆ ನವಿರು ಭಾವಗಳು ಏಕೆ ಉಂಟಾಗುತ್ತವೆ? ಹುಡುಗಿಯರ ಸಾಮೀಪ್ಯ ನೀಡುವ ರೋಮಾಂಚನಕ್ಕಿಂತ ಹುಡುಗರ ಬಳಿ ಇದ್ದಾಗ ಆಗುವ ರೋಮಾಂಚನವೇ ಹೆಚ್ಚಾಗಿದೆ. ಹೆಣ್ಣು ಮಕ್ಕಳ ಜೊತೆ ಯಾವ ಭಾವವೂ ತನಗೇಕೆ ಉಂಟಾಗುತ್ತಿಲ್ಲ? ಗೆಳೆಯರು ಅನುಭವಿಸುತ್ತಿರುವ ಯಾವ ಭಾವಗಳೂ ತನಗುಂಟಾಗುತ್ತಿಲ್ಲವೇಕೆ? ಅದೆಷ್ಟೊ ದಿನಗಳಿಂದ ಕಾಡುತ್ತಿದ್ದ ಅನೇಕ ಪ್ರಶ್ನೆಗಳು ಈ ಗಳಿಗೆಯಲ್ಲಿ ಕಾಡಿ ಹಿಂಸಿಸಿದವು.

ಯಾರಲ್ಲಿ ಇದನ್ನು ಕೇಳುವುದು? ಯಾರು ತನ್ನ ಪ್ರಶ್ನೆಗಳಿಗೆ ಉತ್ತರ ನೀಡುವರು? ಯಾರೊಂದಿಗಾದರೂ ಇದನ್ನು ಹೇಳಿಕೊಳ್ಳಲಾದೀತೇ? ಯೋಚನೆ ಹೆಚ್ಚಾಗಿ ಕಂಪ್ಯೂಟರ್ ಓಪನ್ ಮಾಡಿ ಗೂಗಲ್ ಮಾಡೋಣ ಅಂತ ಹುಡುಕಿದ. ಮೊದಲು ಏನಂತ ಹುಡುಕುವುದು ಅಂತ ಗೊತ್ತಾಗಲೇ ಇಲ್ಲ. ಹುಡುಗರು ಹುಡುಗಿಯ ವೇಷ ಹಾಕುವುದು ಅಂತ ಹೊಡೆದಾಗ 'ಮಂಗಳಮುಖಿ' ಅಂತ ಬಂದಾಗ ಬೆಚ್ಚಿದ. ಆದರೂ ಓದುತ್ತಾ ಹೋದಾಗ ಆ ಎಲ್ಲಾ ಲಕ್ಷಣಗಳು ತನ್ನಲ್ಲಿ ಇವೆ ಅಂತ ಗೊತ್ತಾಯಿತು. ಟೇಬಲ್‌ಗೆ ತಲೆ ಇಟ್ಟು ಜೋರಾಗಿ ಅತ್ತುಬಿಟ್ಟ. ತರುಣ್ ಹತ್ತಿರ ಬಂದು 'ಲೋ ವೀರೂ, ಇದಕ್ಕೆಲ್ಲ ಇಷ್ಟೊಂದು ಹೆದರಿಕೊಂಡಿದ್ದೀಯಲ್ಲ, ಬಾ ನಾನೇ ಅತ್ತೆಗೆ ಹೇಳ್ತಿನಿ, ನಿಮ್ಮ ಮಗನ್ನ ಬೈಬೇಡಿ ಅಂತ' ಎಂದು ಹೇಳಿ ಎಳಿಸಲು ಪ್ರಯತ್ನಿಸಿದ. ಬೇಡ ಎನ್ನುವಂತೆ ತಲೆ ಅಲುಗಿಸಿ ಅಮ್ಮನಿಗೆ ಏನೂ ಹೇಳಬೇಡ. ನಾನು ಓದ್ಕೊತೀನಿ' ಅಂತ ಹೇಳಿ ತರುಣನನ್ನು ತಡೆದ.

ವೀರೂವಿನ ಪರೀಕ್ಷೆ ಮುಗಿಯುವ ತನಕ ಕಾದ ಹೆಂಚಿನ ಮೇಲೆ ಕುಳಿತವಳಂತೆ ಚಡಪಡಿಸುತ್ತಿದ್ದಳು ವಾರಿಜ. ಅಣ್ಣ ಅತ್ತಿಗೆ ಸಮಾರಂಭವೊಂದಕ್ಕೆ ಹೊರಟಿದ್ದರು. ಅಣ್ಣನ ಮಕ್ಕಳಿಬ್ಬರೂ ಕಾಲೇಜಿಗೆ ಹೋಗಿದ್ದರು. ತಾನು ವೀರು ಜೊತೆ ಮಾತನಾಡಲು ಇದೇ ಸರಿಯಾದ ಸಮಯವೆಂದು ಭಾವಿಸಿದಳು. ಪರೀಕ್ಷೆ ಮುಗಿದ ಮಾರನೇ ದಿನ ಒಂಟಿಯಾಗಿ ಸಿಕ್ಕ ಮಗನನ್ನು ಕೂರಿಸಿಕೊಂಡು 'ವೀರು ನೀನು ಎಲ್ಲಾ ಗಂಡು ಮಕ್ಕಳಂತೆ ಯಾಕಿಲ್ಲ, ನಿನಗೆ ಯಾಕೆ ಹೆಣ್ಣು ವೇಷ ಧರಿಸಲು ಇಷ್ಟ, ನೀನ್ಯಾಕೆ ಹುಡುಗಿಯರ ಥರಾ ನಡೆದುಕೊಳ್ಳುತ್ತೀಯಾ, ಇದುವರೆಗೂ ಯಾರಿಗೂ ನಿನ್ನ ಮೇಲೆ ಅನುಮಾನ ಬರದ ಹಾಗೆ ಎಚ್ಚರಿಕೆ ವಹಿಸಿದ್ದರೂ, ಹೆತ್ತ ತಾಯಿಯ ಕಣ್ಣಿಗೆ ಮಣ್ಣೆರಚಲು ಸಾಧ್ಯವಿಲ್ಲ, ಹೇಳು ನಿನಗೇನಾಗುತ್ತಿದೆ?' ಮನದೊಳಗೆ ಕುದಿಯುತ್ತಿದ್ದ ಭಾವನೆಗಳನ್ನು ರಪರಪನೇ ಹೊರಹಾಕಿದಳು. ಅಮ್ಮನ ಪ್ರಶ್ನೆಗಳ ದಾಳಿಗೆ ವೀರೂ ಕಂಗೆಟ್ಟು ಹೋದ. ಏನು ಹೇಳಬೇಕು, ಹೇಗೆ ಹೇಳಬೇಕು, ಯಾವುದು ಹೇಳಬೇಕು ಎಂದು ತಿಳಿಯದೆ ಒದ್ದಾಡಿದ. ಮಗನ ಮೌನ ವಾರಿಜಳನ್ನು ಮತ್ತಷ್ಟು ಕೆರಳಿಸಿ 'ಬಾಯಿ ಬಿಡೋ, ಯಾಕೋ ಇಷ್ಟು ಹೊಟ್ಟೆ ಉರಿಸುತ್ತೀಯಾ, ನಿನಗೇನಾಗಿದೆ ಅಂತ ಹೇಳೋ' ಅಂತ ಅತ್ತೇ ಬಿಟ್ಟಳು ವಾರಿಜ. ಅಮ್ಮನ ಕಣ್ಣೀರು ಅವನಲ್ಲಿ ಧೈರ್ಯ ತುಂಬಿ 'ಅಳಬೇಡಮ್ಮ, ನಂಗೇನು ಆಗಿದೆ ಅಂತ ನಂಗೊತ್ತಿಲ್ಲ, ನನಗೆ ಹುಡುಗಿ ತರಾ ಇರೋಕೆ ಇಷ್ಟ ಅಷ್ಟೆ, ನನ್ನ ದೇಹ ಅಷ್ಟೇ ಹುಡುಗಂದು, ಆದರೆ ನನ್ನ ಮನಸ್ಸು, ಭಾವನೆಗಳೆಲ್ಲ ಹೆಣ್ಣಿನದು, ಅದು ಯಾಕೆ ಅಂತ ನನಗೆ ಗೊತ್ತಿಲ್ಲಮ್ಮ, ನಾನೇನು